## ನಕ್ಷತ್ರಪಟ



ಚಂದ್ರಿಕಾ ಹೆಗಡೆ

### ಚುಕ್ಕಿ-ಚಂದ್ರ

ಇಟ್ಟಿದ್ದಾಳೆ ಇರುಳಮ್ಮ
ಬಾನಂಗಳದ ತುಂಬಾ
ಸಬ್ಬಕ್ಕಿ ಸಂಡಿಗೆ
ಕಾಯಲು ಕುಳಿತ
ಚಂದಪ್ಪನಿಗೋ
ತೂಕಡಿಕೆ!

### ಚುಕ್ಕಿ ಮಕ್ಕಳು

ಮುಗಿಲ ಚಾದರ ಹೊಚ್ಚಿ
ಚುಕ್ಕಿ ಮಕ್ಕಳನು
ತಟ್ಟಿ ಮಲಗಿಸಿದ್ದಾಳೆ ಇರುಳಮ್ಮ
ಹೊದಿಕೆ ಸರಿಸಿ
ಕಣ್ಣು ಪಿಳುಕಿಸಿ ಇಣುಕುತ್ತಿದ್ದಾರೆ
ನಿದ್ದೆ ಬಾರದ ತುಂಟ ಮಕ್ಕಳು!

### ಚಂದಮಾಮ

ಬಾನ ಕಾವಲಿಯಲ್ಲಿ
ಇರುಳಮ್ಮ ಎರೆದಿದ್ದಾಳೆ
ಬಿಳಿ ಹಿಟ್ಟಿನ ದೋಸೆ
ಬದಿಯಲ್ಲಿ ಬಡಿಸಿದ್ದಾಳೆ
ತಿಳಿ ಮುಗಿಲ ಬೆಣ್ಣೆ!

### ಬೆಳದಿಂಗಳು

ಇರುಳಮ್ಮ
ಕುಡಿಯಲು ಕೊಟ್ಟ ಹಾಲನ್ನೆಲ್ಲಾ
ನೆಲಕ್ಕೆ ಚಲ್ಲಿ ಬಿಟ್ಟಿದ್ದಾನೆ
ತುಂಟ ಚಂದಿರ!

### ಚೌತಿ ಚಂದ್ರ

ಅರೆರೆ... ಅರೆರೇ...
ಅದೇನು ಮೇಲೆ
ಮೋಡದ ಮರೆಯಲಿ
ಮೆಲ್ಲನೆ ಮೂಡಿದೆ
ಚೌತಿಯ ಚಂದ್ರನ
ನಗುಮೋರೆ!